
REVIEW OF LITERATURE
ISSN: 2347-2723
IMPACT FACTOR : 2.0260(UIF)
VOLUME - 4 | ISSUE - 8 | MARCH – 2017

# ಯು.ಆರ್. ಅನಂತಮೂರ್ತಿಯವರ ಕಾವ್ಯಗಳಲ್ಲಿ ಮಾನವಪರ ಧೋರಣೆಗಳು

ಡಾ. ಶಿವಗಂಗಾ ಯು. ಬಿಲಗುಂದಿ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಯು.ಆರ್. ಅನಂತಮೂರ್ತಿಯವರು ಮೌಢ್ಯಕ್ಕೆ ಎಂದು ಒಳಪಟ್ಟು ಕವನ ರಚಿಸಿದವರಲ್ಲ. ವೈಚಾರಿಕ ನೆಲೆಗಟ್ಟಿನ ಮೇಲೆ ಕವನ ರಚಿಸಿದವರು. ಯಾವೂದೋ ಒಂದು ಸಂಪ್ರದಾಯಕ್ಕೋ ಜಾತಿಗೂ, ಜನಾಂಗಕ್ಕೊ ಕಟ್ಟು ಬೀಳುವ ಜಾಯಮಾನ ಅವರದಲ್ಲ. ಮಾನವ ಜನಾಂದ ಸಮಾನತೆಯ ದೃಷ್ಟಿಕೋನ ಮತ್ತು ಮಾನವ ಪರ ಕಳಕಳಿಗಳು ಅವರ ಕನವಗಳಲ್ಲಿ ವ್ಯಕ್ತವಾಗುತ್ತದೆ. ಪತ್ರಿಯೊಂದು ಕವನಗಳು ಸಮಾಜದಲ್ಲಿನ ಗೊಡ್ಡು ಸಂಪ್ರದಾಯಗಳನ್ನು ತಿದ್ದುವ ಸಮಾಜವನ್ನು ಕೈಹಿಡಿದು ನಡೆಸುವದು, ಅವರ ಗುರಿಯಾಗಿರುತ್ತದೆ. ಅವರು ಯಾವುದೇ ಜಾತಿ ಮೇಲಲ್ಲ ಮತ್ತು ಕೀಳಲ್ಲ ಎನ್ನುತ್ತಾರೆ. ಅವರು ಸ್ವತಃ ಬ್ರಾಹ್ಮಣರಾದರು, ಆ ಜಾತಿಯ ಬಗ್ಗೆ ಗೌರವವಾಗಲಿ, ಅಥವಾ ದುರಾಭಿಮಾನವಾಗಲಿ ಇಲ್ಲ. ಕೆಟ್ಟಿದ್ದನ್ನು ತಿರಸ್ಕರಿಸುವ ಒಳ್ಳೆಯದನ್ನು ಸ್ವೀಕರಿಸುವ ಅವರ ಉದಾರ ಭಾವನೆ ದೊಡ್ಡದು. ಹೀಗೆ ಅವರ ಕವನಗಳು ವಿಮರ್ಶಿಸುತ್ತಾ ಹೋದಾಗ ಮಾನವದರ್ಶನವಾಗುತ್ತದೆ. ಯಾವುದೊ ಒಂದು ಅಗಾಧ ಶಕ್ತಿ ನಮ್ಮನ್ನು ಮುನ್ನನಡೆಸಿದಂತೆ ಗೋಚರವಾಗುತ್ತದೆ. ಅವರ ಇಲ್ಲಿನ ಕವನದ ರೀತಿಯನ್ನು ನೋಡಬೇಕು



"ಸ್ವಾಮಿ
ಕೆನೆಯುದಿಲ್ಲವೇಕಯ್ಯ ಅಗಸನಕತ್ತೆ ಕುದುರೆಯಂತೆಂದು ನಿನ್ನ ಸೃಷ್ಟಿಯ ಗುಟ್ಟು
ಕೆದಕ ಬಂದವನಲ್ಲ ಕೆಡಕು ಬಯಸಿದ್ದಲ್ಲ, ಧೈರ್ಯವು ಇಲ್ಲ
ಹಗಲೆಲ್ಲ ಹರಟೆ, ರಾತ್ರೆ –
ಮೆರೆದಾಗ ಮರೆತಿದ್ದ, ಬೆರೆಳಿತ್ತೆ ಬೆದರಿಸುವ
ಪಾವ್ತಿ ಮಾಡದೆ ಉಳಿವ ಬಿಲ್ಲುಗಳ ಕಾಟಕ್ಕೆ ನಿದ್ದೆ ಬರದೇ ಹೊರಳಿ
ಬೇಯುವ ಮಂಚಕ್ಕೆ ಆಯುಷ್ಯ ಬಯಸಿದವನು
ಮೂಗು ಅಡಿಯಾಯ್ತೆನ್ನು
ಮೀಸೆ ಮಣ್ಣಾಗಿಲ್ಲ, ಪರವಾಗಿಲ್ಲ ಎಂದುಕೊಡವಿ ಕೊಂಡಿದ್ದೆ
ನೂಣ ತಿಂದು ಜಾತಿ ಕೆಡಿಸಿ ಕೊಂಡೀ ಪೆದ್ದ
ಅಂತಿಂಥ ಮೆಂತೆ ಕದ್ದಂತ ಮರ್ತ್ಯ ವಿಶೇಷವೆನೂ ಇರದ
ಕೊಂಡಾಡಿಭಟ್ಟ ಉಂಡಾಡಿ ಗುಂಡ ಇವರ ಜೊತೆ ಇವನಿನ್ನೊಬ್ಬ"[೧]

ಈ ಕವನದಲಿ ಸೃಷ್ಟಿಯಗುಟ್ಟನ್ನು ಹೇಳುತ್ತಾ ಕತ್ತೆಯನ್ನೆ ಕುದರೆಯೆಂದು ನಂಬುವ ಪ್ರಸಂಗ ಬರುತ್ತದೆ. ಈಗ ನಮಗೆ ಬಂದಿದೆ. ದುಷ್ಟ ರಾಜಕಾರಣಿಗಳನ್ನು ಒಳ್ಳೆಯವರೆಂದು ನಂಬಬೇಕಾಗಿದೆ. ಅವರನ್ನೇ ನಾವು ದೇವರೆಂದೆ ಪೂಜಿಸ ಬೇಕಾಗಿದೆ, ಏನುಮಾಡುವುದು ಅದು ಬಿಟ್ಟರೆ ನಮಗೆ ಬೇರೆ ಮಾರ್ಗವಿಲ್ಲ ಎನ್ನುತ್ತಾರೆ. ಆದರೆ, ಅವರಿಗೆ ಕೆಡಕನ್ನು ಬಯಸಿಲ್ಲ ಮತ್ತು ಬಯಸುವ ಧೈರ್ಯವು ನನ್ನಲ್ಲಿ ಇಲ್ಲವೆಂದು ಮೃದುವಾಗಿ ನುಡಿಯುತ್ತಾರೆ.

ತಮ್ಮ ವರ್ಚಸ್ಸಿನಿಂದ ಇರುವ ರಾಜಕಾರಣಿಗಳು ತಮ್ಮ ಮನೆ ವ್ಯಾಪಾರ ವಹಿವಾಟಿನ ಯಾವುದೇ ಬಿಲ್ಲು ಕಟಿರುವುದಿಲ್ಲ. ಹಗಲೆಲ್ಲ ಉನ್ನತ ಅಧಿಕಾರಿಗಳ ಜೊತೆ ಹರಟೆ, ಊಟ, ಗುಂಡು ಹೊಡೆದು ಆರಾಮವಾಗಿ ಕಾಲ ಕಳೆಯುವರು ಅವರಿಗಿಲ್ಲ ಮಾನವರ ಚಿಂತೆ. ಆರಾಮವಾಗಿ ತಮ್ಮ ಮಂಚದ ಮೇಲೆ ಆಯುಷ್ಯಲ್ಲವನ್ನು ಕಳೆದು ಕೊಳ್ಳುತ್ತಾರೆ. ಚುನಾವಣೆಗಳಲ್ಲಿ ಸೊತರು ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. 'ಮಿಸೆ ಮಣ್ಣಾಗಿಲ್ಲ ಪರವಾಗಿಲ್ಲ' ಎಂದು ಕೊಳ್ಳುತ್ತಾರೆ. ಜಾತಿ ಭೇದವಿಲ್ಲದೆ ಕುರಿ, ಕೊಳಿ, ಹೆಂಡ ಕುಡಿದು, ತಿಂದು ತೆಕುತ್ತಾರೆ. ಇವರು ಕೇವಲ ಹೊಗಳು ಬಟ್ಟರು, ಉಂಡಾಡಿ ಗುಂಡನಂತೆ ಇರುತ್ತಾರೆ. ಇಂಥವರಿಗೆ ಮಾನವರ ಬಗ್ಗೆ ಕಳಕಳಿ ಹೇಗೆ ಬರುತ್ತದೆ ಎಂದು ಕವಿ ದುಃಖ ಪಡುತ್ತಾರೆ.

"ಹೊತ್ತಾರೆ ಎದ್ದು ಹೊತ್ತುಮುಳುಗುವವರೆಗು
ಮೂಗು ಮುರಿಯಲು ಅಂಜಿ ಅಪರಂಜಿ ನಗು ನಗವಿ
ಉರುಳು ಸೇವೆಯ ಹರಕೆ ಯವ ಪುರಷಾರ್ಥಕ್ಕೆ?
ಜೀವವೇ ಜೀವವೇ
ಎಂದು ಅಳು ಬಂದು ಕೂಡ, ಈ ಮೂಢ
ಹೇಳಿಕೆಯನೊಂದನಿತ್ತ ಮಾತ್ರಕ್ಕೆ ದೇಶದ್ಯಾಂತ ನಡೆಸಲಾರದೆ ದೊಂಬಿ
ತಲೆ ನೋವಿಗೆರಡು ಮಾತ್ರೆ ನುಂಗಿ ತೆಲೆ ಕೆರೆದೆ
ಪಠಿಸಲೇ ಡುಕ್ರಿಂಕರಣ?
ಬಿಡಿಸಲೇ ಗಡ್ಡ
ಶಿಂಗಲೀಕನ ನಂಬಿ ತೋರಿಸಲೆ ಅಂಗೈಯೆ?
ಕಸ್ತೃ ದೇವಾಲಯ ಹವಿಷು ವಿಧೇಯ?"[2]

ಪೊಳ್ಳು ರಾಜಕಾರಣಿಗಳೂ ತಮ್ಮ ದಿನವನ್ನು ಇನ್ನೊಬ್ಬನ ಸೇವೆಗೆಂದು ನೆಪವಾಗಿ ಹೇಳುತ್ತಾರೆ ಮತ್ತು ದೇಶ ಉದ್ಧಾರವಾಗಲು ದೇವರಿಗೆ ಉರುಳು ಸೇವೆಮಾಡಲು ಮುಂದಾಗುತ್ತಾರೆ. ದೂರದರ್ಶನದಲ್ಲಿ ಆಕಾಶವಾಣಿ, ದಿನಪತ್ರಿಕೆಗಳಲ್ಲಿ ಸುದ್ಧಿ ಮಾಡುತ್ತಾರೆ. ಆದರೆ ಕವಿ ಇವೆಲ್ಲಾ ಯಾವ ಪುರುಷಾರ್ಥಕ್ಕೆ? ಎಂದು ಪ್ರಶ್ನೆಮಾಡುತ್ತಾನೆ.

ಆದರೆ ಈ ರಾಜಕಾರಣಿ ಯವುದಾದರೂ ಒಂದು ಜಾತಿ ಜನಾಂಗದ ಬಗ್ಗೆ ಪೊಳ್ಳು ಹೇಳಿಕೆ ನೀಡಿದರೆ, ದೇಶದಲ್ಲಿ ಜನಾಂಗೀಯ ಗಲಬೆಯಾಗಿ ದೇಶವೇ ಸ್ತಬ್ದವಾಗಿ ಹೊಗುತ್ತದೆ. ದೇಶಾದ್ಯಂತ ಹೋರಾಟ, ಜಗಳಗಳೂ ತಲೆನೋವಾಗಿ ಪರಿಣಮಿಸುತ್ತದೆ. ಅದಕ್ಕೆ ನಾನು ಇವೆಲ್ಲವನ್ನು ನೋಡುಲಾರದೆ ಎಂದು ಮಾತ್ರೆ ನುಂಗಿ ಮಲಗು ಕೊಳ್ಳುತ್ತೇನೆ. ಎಂದು ಮೌನ ಹೋರಾಟವನ್ನು ಪ್ರತಿಧ್ವನಿಸುತ್ತಾರೆ. ಸುಮ್ಮನೆ ಪೊಳ್ಳು ವೇಷಗಳನ್ನು ಧರಿಸಿ ನಯವಾದ ಬಿಳಿಯ ಗಡ್ಡವನ್ನು ಬಿಟ್ಟು ಬಿಳಿಯ ಬಟ್ಟೆಯನ್ನು ಧರಿಸಿ, ಮಾಡುವುದೆಲ್ಲ ನೀಚ ಕೆಲಸ ಆದರೆ ನೋಡಲು ಮೃದುವಾದ ಮಾತು ನಡೆನುಡಿಗಳು ಮಾತ್ರ ಎನ್ನುತ್ತಾರೆ.

ದೇಶದ ಚಿಂತೆಯ ಜೊತೆ ತಮ್ಮ ವೈಯುಕ್ತಿ ಬದುಕಿನ ಚಿಂತೆಯ ಒಂದು ಕಡೆ ಕಾಡುತ್ತದೆ. ಎನ್ನುತ್ತಾರೆ.

"ಕೂದಲುದುರದ ಹಾಗೆ ಏನುಮಾಡಲಿ
ಯಾರ ಮೋರೆ ಹೊಗಲಿ–ಎಂಬೀ
ಹಾಳು ಚಿಲ್ಲರೆ ಚಿಂತೆ ಆಗೀಗ ಇಣುಕಿ ಹೋದಾಗ
ನಿನ್ನಲ್ಲಿ ಸಮಾನಂತ ರೇಖೆಗಳಿಲ್ಲ ಸಂದಿಸುವವೆಯ ಹೇಳುವವರ ಹೇಳಿಕೆಯ ಅದೆನಂಬಿ"[3]

ಹೀಗೆ ಚಿಂತೆಯ ಜೊತೆಯಲ್ಲಿ ಮುಳುಗಿ ಹೋಗುತ್ತಾರೆ. ತಲೆಯ ಮೇಲಿನಕೂದಲು ಉದಿರಿ ಹೋಗುತ್ತಲಿವೆ, ಯಾರನ್ನು ನಂಬಿ ಮೊರೆ ಹೋಗಲಿ ಎನ್ನುತ್ತಾರೆ. ಯಾವುದಾದರೊಂದು ಚಿಲ್ಲರೆ ಚಿಂತೆ ನನ್ನನ್ನು ಕಾಡುತ್ತಲೆ ಇರುತ್ತದೆ. ದೇಶದ್ದಾದರು ಆಗಿರಬಹುದು ಅಥವಾ ನನ್ನ ವೈಯುಕ್ತಿಕ ಆರೋಗ್ಯದ ಚಿಂತೆಯಾದರು ಯಾವುದಾದರು ಒಂದ ನನ್ನನ್ನು ಸದಾಕಾಡುತ್ತದೆ. ಯಾರದೊ ಹೇಳಿಕೆ ಸತ್ಯವೆಂದು ನಂಬುತ್ತೇನೆ ಆದರೂ ಅವರು ಅದನ್ನೇ ಪೂರ್ಣ ಸತ್ಯವೆಂದು ಕಟ್ಟು ಬಿಳಲಾರೆ ಎನ್ನುತ್ತಾರೆ.

"ಸೀಟಿ ಹಾಕುತ ಸಂಜೆ ವಾರೆಂಗಿನಲಿ
ಕಲಿ ಸಹಜ ಬಡಿವಾರದಲಿ
ಊಹೆಂಚಿನಲಿ ಹೇಗೂಮುಗ್ಗರಿಸಿದಂತೆನು ನಿಂತು ಬರೆದರ್ಜಿ–
ಇದು ಹೊಸವರ್ಷ
ಹರ್ಷದುತ್ಕಾರ್ಷದಲಿ ಓ ಸಹಸ್ರಶೀರ್ಷ
ಎಷ್ಟು ಶುಭಾಷಯ ಕಳಿಸಿ ದಣಿದಿರುವುದೇನು ಜೊತೆಗೆ

ಸನ್ನಿದಾನದ ಚಿತ್ರ ಹೆಗೊಂಟು ತಿಳಿಯೆ
ಮೈ ತುಂಬಿ ಕೊಂಡರೊ
ಹೊಕ್ಕಳುಳಗೆ ಅಡಗೀ ಕಣ್ಣುಜ್ಜಿ ಆ ಕಳನೆ
ಜೋರಲಾಗುವ ನಮ್ಮ ನವ್ಯ ವ್ಯಥೆ ಆಲಯಸುವಿಯ?"[೪]

ಹೀಗೆ ಮಾನವರ ಪರಚಿಂತನೆಯಲ್ಲಿ ತೋಡಗುತ್ತ ರಿವರೂ, ಕವಿ ಸಹಜವಾದ ಚಿಂತೆಯೊಂದು ಅವರ ಎದೆಯ ಅಂತರಾಳದಲ್ಲಿ ಕಾಡುತ್ತಿರುವ ಅಂಶ ಬಂದಂತೆ ದೇಶದ ಆಗುಹೋಗು ಬಗ್ಗೆ ಚಿಂತಿಸುತ್ತಿರುವಾಲೇ ಹೊಸವರ್ಷ ಮರುಕಳಿಸಿಬರುತ್ತದೆ. ಹೊಸವರ್ಷ ದುಃಖ ದುಮ್ಮಾನಗಳೆಲ್ಲ ಮುಗ್ಗರಿಸಿ ಹೋಗಿ ಹೊಚ್ಚ ಹೊಸ ಹೊಸಸುದ್ಧಿಗಳನ್ನು ತರಬೇಕು ಹಳೆಯದನ್ನೆಲ್ಲಾವನ್ನು ಕೆದುಕುವುದು ಬಿಟ್ಟುಹೊಸದೊಂದನ್ನು ಹಿಡಿಯಬೇಕು. ಹಳೆಯದನ್ನೆಲ್ಲವನ್ನು ಬಿಟ್ಟು ಹೊಸ ಹುಮ್ಮಸ್ಸಿನಿಂದ, ಹೊಸ ಹುರುಪಿನಿಂದ ತಮ್ಮ ಬಾಳಿನಲ್ಲಿ ಒಳ್ಳೆಯ ದನ್ನೆ ಪರರಿಗೆ ಮಾಡುತ್ತಾ ತಾವು ಒಳ್ಳೆಯದನ್ನೆ ನಿರೀಕ್ಷಿಸಬೇಕು ಎನ್ನುತ್ತಾರೆ.

ಎಷ್ಟೇ ಕಷ್ಟ ಎದ್ದರು ಅದನ್ನೆಲ್ಲ ಕಣ್ಮುಚ್ಚಿ ಆಕಳಿಸಿ ಮರೆಯಬೇಕು ಎನ್ನುತ್ತಾರೆ. ಹೀಗೆ ಏನಾದರಾಗು ಮೊದಲು ಮಾನವನಾಗು ಎಂದುಕರೆಕೊಟ್ಟಂತೆ, ಇವರು ಸಹ ರಾಜಕಾರಣಿಗಳ ಭಂಡಸೇವೆಯನ್ನು ಪತ್ತೆ ಹಚ್ಚಿ ನಾವು ಹೇಗಿರಬೇಕು ಎನ್ನವುದನ್ನು ಜನರಿಗೆ, ಮಾನವರಿಗೆ ಮಾಗದರ್ಶನ ಮಾಡುತ್ತಾರೆ. ಮಾನವರು ಸುಃಖ ಶಾಂತಿ ನೆಮ್ಮದಿಯಿಂದ ಬಾಳಬೇಕು ಎಂದು ಕರೆಕೊಡುತ್ತಾರೆ.

### ಅಡಿಟಿಪ್ಪಣಿ

೧. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ.ಪು – ೩
೨. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ.ಪು – ೩
೩. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ.ಪು – ೪
೪. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ.ಪು – ೫



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**